## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ

## ಕೆ.ಆರ್.ನಗರ

## ಸಿ.ಸಿ.1237/2016

**ಪಿಡಬ್ಲೂ-1**

**ದಿನಾಂಕ 17-02-2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. ಪಾಟೀ ಸವಾಲು ಶ್ರೀ ಟಿ ಜಿ ವಕೀಲರಿಂದಃ ಆರೋಪಿ ಪರ ವಕೀಲರುಃ**

ನನ್ನ ತಾಯಿಯ ಊರು ಜೇನನಹಳ್ಳಿ ಎಂದರೆ ಸರಿಯಲ್ಲ. ಸಾಕ್ಷಿ ಹುಣಸೂರು ಎಂದು ನುಡಿಯುತ್ತಾರೆ. ನನ್ನ ತಂದೆ ತಾಯಿಯ ಮನೆ ಜೇನನಹಳ್ಳಿ ಎಂದರೆ ಸರಿ. ನಾನು ನನ್ನ ಅಜ್ಜಿ ಮನೆಗೆ ಹೋಗು ಬರು ಮಾಡುತ್ತೆನೆ ಎಂದರೆ ಸರಿ.

ದಿವ್ಯಾ ಬಿನ್ ಬಾಲರಾಜಪ್ಪ ಇವರು ಜೇನನಹಳ್ಳಿ ಮೊಮ್ಮಗಳು ಎಂದರೆ ಸರಿ. ನನಗೆ ಸದರಿಯವರ ಪರಿಚಯ ಇದೆ. ನಾನು ದಿವ್ಯಾಳನ್ನು ನನಗೆ ಇಷ್ಟ ಪಡು ಎಂದು ಹೇಳಿ ಕಿರುಕುಳ ನೀಡಿದ್ದೇನೆ ಎಂದರೆ ಸರಿಯಲ್ಲ. ಆ ಸಂಬಂದ ನಮ್ಮ ಊರಿನಲ್ಲಿ ಪಂಚಾಯತಿ ಆಗಿ ಪೋಲೀಸ್ ಠಾಣೆ ಮೆಟ್ಟಿಲು ಹತ್ತಿದ್ದೀರ ಎಂದರೆ ಸರಿಯಲ್ಲ. ಸದರಿ ಹುಡುಗಿಗೆ ಮಿರ್ಲೇ ಗ್ರಾಮದ ಶಿವಕುಮಾರ್ ಎನ್ನುವವರ ಜೊತೆ ಮದುವೆ ನಿಶ್ಚಯ ಆಗಿತ್ತು ಎಂದರೆ ಗೊತ್ತಿಲ್ಲ.

ನಾನು ಶಿವಕುಮಾರ್ ಇವರಿಗೆ ನೀನು ದಿವ್ಯಾಳನ್ನು ಮದುವೆಯಾದರೆ ನಿನ್ನ ಮೇಲೆ ಲಾರಿ ಹತ್ತಿಸುತ್ತೇನೆ ಎಂದು ಹೇಳಿ ಕೊಲೆ ಬೆದರಿಕೆ ಹಾಕಿದ್ದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೆ ಶಿವಕುಮಾರ್ ಇವರ ಪರಿಚಯ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಈ ರೀತಿ ಮಾಡಿದ್ದರಿಂದ ಸದರಿಯವರ ಮದುವೆ ಮುರಿದು ಹೋಯಿತು ಎಂದರೆ ಸರಿಯಲ್ಲ.

ಸದರಿ ದಿವ್ಯಾ ಹಾಗೂ ಆರೋಪಿ ಇವರು ಸಂಬಂದಿಕರು ಎಂದರೆ ಗೊತ್ತಿಲ್ಲ. ಈ ರೀತಿ ಈ ಘಟನೆ ಆದ ನಂತರ ಹುಡುಗಿಯ ತಂದೆ ತಾಯಿ ಇವರು ನಮ್ಮ ಮನೆಗೆ ಬಂದು ನನ್ನ ತಂದೆ ತಾಯಿ ಇವರಿಗೆ ಈ ರೀತಿ ಮಾಡಿ ತೊಂದರೆ ನೀಡಬೇಡಿ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ನಾನು ಆರೋಪಿ ಇವರು ದಿವ್ಯಾಳೊಂದಿಗೆ ನನ್ನ ಮದುವೆ ಮಾಡಿಸಿಲ್ಲ ಎಂದು ಹೇಳಿ ಅವರ ವಿರುದ್ದ ಸುಳ್ಳು ದೂರನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ದೂರಿನಲ್ಲಿ ನಾನು ಆರೋಪಿ ಇವರು ನನಗೆ ದೂರವಾಣಿ ಕರೆ ಮಾಡಿ ತನ್ನ ಬಳಿ ಕರೆಸಿಕೊಂಡು ಹೋಡೆದಿರುತ್ತಾರೆ ಎಂದು ಹೇಳಿದ್ದು ಆ ರೀತಿ ಅವರು ಯಾವ ಸಂಖ್ಯೆ ದೂರವಾಣೆಯಿಂದ ಕರೆ ಮಾಡಿದ್ದರು ಎಂದು ನನಗೆ ಹೇಳಲಾಗುವುದಿಲ್ಲ. ನನಗೆ ನನ್ನ ದೂರಿನಲ್ಲಿ

ಆರೋಪಿ ಇವರು ಇಂತಾ ಸಂಖ್ಯೆ ದೂರವಾಣಿಯಿಂದ ನನಗೆ ಕರೆ ಮಾಡಿದ್ದರು ಎಂದು ತಿಳಿಸಲು ತೊಂದರೆ ಇತ್ತು.

ನನಗೆ ಆರೋಪಿ ಇವರು ಮರ ತೆಗೆದುಕೊಳ್ಳಬೇಕು ಎಂದು ಕರೆಸಿದರು ಎಂದು ನಾನು ನನ್ನ ಸಾಕ್ಷಿ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದು ಆದರೆ ನಾನು ಯಾವುದೆ ಮರದ ವ್ಯಾಪಾರ ಮಾಡುವುದಿಲ್ಲ. ನನ್ನ ಅತ್ತೆ ಮಗ ಚಾಸಾ 2 ರವರಿಗೆ 30 ವರ್ಷ ಅವರು ವ್ಯವಸಾಯ ಮಾಡುತ್ತಾರೆ. ಸದರಿಯವರಿಗೆ ಸದರಿ ಸಮಯದಂದು ವ್ಯಾವಹಾರಿಕ ಜ್ಞಾನ ಇತ್ತಾ ಎನ್ನುವ ಪ್ರಶ್ನೆಗೆ ಸಾಕ್ಷಿ ಇತ್ತು ಎಂದು ನುಡಿಯುತ್ತಾರೆ.

ಸದರಿಯವರು ವ್ಯವಹಾರ ಜ್ಞಾನ ಇದ್ದರಿಂದ ಆರೋಪಿ ಇವರಿಗೆ ಮರ ಬೇಕಾಗಿದ್ದರೇ ಆರೊಪಿ ಇವರು ಹಾಗೂ ಚಾಸಾ 2 ರವರು ಅವರವರೇ ಬಗೆಹರಿಸಿಕೊಳ್ಳುತ್ತಿದ್ದರು ನನ್ನ ಅವಶ್ಯಕತೆ ಇರಲಿಲ್ಲ ಎಂದರೆ ಸಾಕ್ಷಿ ಆ ಸಮಯದಲ್ಲಿ ಚಾಸಾ 2 ರವರ ತಂದೆ ತಾಯಿ ಮನೆಯಲ್ಲಿ ಇರದ ಕಾರಣ ನಾನು ಹೋಗಿದ್ದೆ ಎಂದು ನುಡಿಯುತ್ತಾರೆ.

ನಾನು ನನ್ನ ಪ್ರಕರಣವನ್ನು ಬಲಪಡಿಸುವ ಉದ್ದೇಶವಾಗಿ ಸದರಿ ಮರದ ವಿಚಾರವನ್ನು ನನ್ನ ದೂರಿನಲ್ಲಿ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಸದರಿ ದಿನದಂದು ಠಾಣೆಗೆ  ಹೋಗಿ ದೂರು ನೀಡಲು ತೊಂದರೆ ಇತ್ತು. ಸಾಕ್ಷಿ ಮುಂದುವರೆದು ನನಗೆ ಸಿಕ್ಕಾಪಟ್ಟೆ ಏಟಾಗಿತ್ತು ಎಂದು ನುಡಿಯುತ್ತಾರೆ.

ಆರೋಪಿ ಇವರು ಮೂಮಾ 1 ರಿಂದ ಹೊಡೆದಾಗ ನನ್ನ ಮುಖಕ್ಕೆ ಬರೆ ಹಾಗೂ ರಕ್ತದ ಗಾಯ ಆಗಿತ್ತು. ಈ ರೀತಿ ಬಂದ ರಕ್ತ ನಾನು ಧರಿಸಿದ ಶರ್ಟಿಗೆ ತಾಗಿತ್ತು. ಸದರಿ ಬಟ್ಟೆಯನ್ನು ಪೋಲೀಸರಿಗೆ ನೀಡಿರುವುದಿಲ್ಲ. ಸದರಿ ದಿನದಂದು ನಮ್ಮ ಅತ್ತೆ ಮನೆ ಬೀಗ ಹಾಕಲಾಗಿತ್ತು. ಈ ರೀತಿ ನಮ್ಮ ಅತ್ತೆ ಮನೆ ಬೀಗ ಹಾಕಿದ್ದರಿಂದ ಆರೋಪಿ ಇವರು ಅವರ ಮನೆಗೆ ಬಂದಿರಲಿಲ್ಲ ಎಂದರೆ ಸಾಕ್ಷಿ ಚಾಸಾ 2 ರವರು ಬಂದು ಬೀಗ ತೆಗೆದ ನಂತರ ಬಂದಿರುತ್ತಾರೆ ಎಂದು ನುಡಿಯುತ್ತಾರೆ.

ಆರೋಪಿ ಇವರು ಸ್ಥಳಕ್ಕೆ ಬಂದು ನನಗೆ ಹೊಡೆದಿರುವುದಿಲ್ಲ ಸದರಿ ದಿವ್ಯಾಳ ವಿಚಾರವಾಗಿ ನಾನು ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ದೂರಿನಲ್ಲಿ ಆರೋಪಿ ಇವರು ನನ್ನ ಎಡಗಾಲಿಗೆ ಮಚ್ಚಿನಿಂದ ಹೊಡೆದಿರುವ ಬಗ್ಗೆ ತಿಳಿಸಿರುತ್ತೇನೆ. ಆದರೆ  ಎಡಗಾಲಿನ ಯಾವ ಭಾಗದಲ್ಲಿ ಎಂದು ತಿಳಿಸಿರುವುದಿಲ್ಲ ಎಂದರೆ ಸರಿ. ಚಾಸಾ 4 ನನ್ನ ಸಂಬಂಧಿಕರು ಎಂದರೆ ಸರಿಯಲ್ಲ. ಚಾಸಾ 4 ರವರು ಸದರಿ ಸಮಯದಲ್ಲಿ

ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

ಅದೇ ರೀತಿ ಚಾಸಾ 2 ಮತ್ತು 3 ರವರೂ ಸಹ ಸ್ಥಳದಲ್ಲಿ ಹಾಜರಿರಲಿಲ್ಲ ಎಂದರೆ ಸರಿಯಲ್ಲ. ಪೋಲೀಸರು ಘಟನಾ ಸ್ಥಳಕ್ಕೆ ಬಂದಿರುವುದಿಲ್ಲ ಹಾಗೂ ಸ್ಥಳದಲ್ಲಿ ಮಹಜರ್ ಮಾಡಿ ಯಾವುದೇ ವಸ್ತುಗಳನ್ನು ವಶಕ್ಕೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ನನ್ನ ಸ್ಕೂಟರ್ ಮೇಲಿಂದ ಬಿದ್ದು ಸದರಿ ಗಾಯಗಳನ್ನು ಮಾಡಿಕೊಂಡಿರುತ್ತೆನೆ ಆರೋಪಿ ನನ್ನ ಮೇಲೆ ಯಾವುದೇ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇರುವುದಿಲ್ಲ.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಗಾಯತ್ರಿ)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ